# S.V.M Arts, Science and Commerce College Ilkal

## 4/ 37 B COY NCC, SVM COLLEGE ILKAL

# NCC ACTIVITY REPORT OF THE YEAR 2018 -19

# NCC ENROLLMENT DETAILS

## NCC Cadets Enrollment Report of SVM College Ilkal 2018-19

As per instruction by NCC Commanding officer Col.Sunil Yadav of 37 kar ncc bn bagalkot. NCC enrolment for the year 2018-19 was conducted on 4th july 2018 at SVM College Ilkal. Information on the selection process, date and reporting time were noticed to the aspirants on 25th of May 2018. Totally 285(240 SD and 45 SW) aspirants form B.Sc, B.A, B.Com and PUC were attended the selection process. Enrolment process started at 9.00 AM. Communication test was

conducted by commanding officer. Among 285 aspirant 62(37 SD and 34 SW) were selected for further process. The selected aspirants were further tested for their physical fitness. Finally based on communication skill, physical fitness, number of vacancy and reservation policy for selection totally 52 (35 SD and 17SW) cadets were selected and 13 SD and 03 SW cadets were placed in reserved. The list of the selected cadets was finalized in presence of Commanding officer and Dr.Shridhar .A.H CTO of SVM College and the list is verified and witnessed by Dr. B.K.Naik Principal of SVM College and PI staff of 37karnccbnbgalkot.

.

# NCC CAMP DETAILS

## CATC CAMP Report of SVM College Ilkal 2018-19

36 NCC Cadets ( **Boys - 24: 20, Girls -12** ) Were participated in the CATC- II camp which is held at Bagalkot form **13/07/2018 to 22/07/2018**. Won 1 st Prize in Group Drill.



# <u>Adventure Report Camp Report of SVM College Ilkal 2018-19</u>

12 NCC Cadets of our college represented Bellary Group for Adventure camp which was held at Bengaluru, Karnataka form **10/03/018 to 19/03/2018**



# ACHIEVEMENTS

# <u>CATC Camp 2018-19 Over all Champions</u>





# SOCIAL SERVICE ACTIVITY BY NCC CADETS

# Swatch Bharath Abhiyan

NCC Cadets of our college actively involved in the social activity programme. Under Swatch Bharath Abhiyan NCC Cadets cleaned college campus and statue of local importance. NCC cadets have done the campaign about “dengue disease” awareness with collaboration of Municipal Corporation of Ilkal





# ರಾಷ್ಟ್ರೀಯ ಸೇವಾ ಯೋಜನೆ ಘಟಕ

## 2018–19

## ಎನ್.ಎಸ್.ಎಸ್. ದೈನಂದಿನ ವಾರ್ಷಿಕ ವರದಿ

ಪ್ರಸಕ್ತ ಶೈಕ್ಷಣಿಕ ವರ್ಷದ ಎನ್.ಎಸ್.ಎಸ್ ವಿಶೇಷ ಶಿಭಿರದ ಘಟಕದಡಿಯಲ್ಲಿ ವರ್ಷದುದ್ದಕ್ಕೂ ಹಮ್ಮಿಕೊಳ್ಳಲಾದ ವಿವಿಧ ಕಾರ್ಯಕ್ರಮಗಳ ಹಾಗೂ ಸ್ವಯಂಸೇವಕರು ಮಾಡಿದ ಶ್ರಮದಾನದ ಬಗ್ಗೆ ವರದಿಯನ್ನು ಸಂಕ್ಷಿಪ್ತವಾಗಿ ತಿಳಿಸಲಾಗುತ್ತಿದೆ. ಆರಂಭದಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿಗಳ ಸಭೆ ಕರೆದು ಎನ್.ಎಸ್.ಎಸ್. ಬಗ್ಗೆ ತಿಳಿಸಿದಾಗ ಸ್ವಯಂ ಇಚ್ಛೆ ವ್ಯಕ್ತ ಪಡಿಸಿದ 100 ವಿದ್ಯಾರ್ಥಿಗಳನ್ನು ಆಯ್ಕೆಮಾಡಲಾಯಿತು. ಎನ್.ಎಸ್.ಎಸ್. ಅಧಿಕಾರಿಗಳಾದ ಡಾ. ಎಸ್.ಜಿ. ಸಜ್ಜಲಗುಡ್ಡ ಹಾಗೂ ಸಹ ಕಾರ್ಯಕ್ರಮಾಧಿಕಾರಿ ಪ್ರೊ. ಶಿವಾನಂದ ಡಿ. ಕೆಂಚಾಯಿಗೋಳ ಅವರು "ಆರೋಗ್ಯವಂತ ಭಾರತಕ್ಕೆ ಆರೋಗ್ಯವಂತ ಯುವಕರು" ಎಂಬ ಶಿರೋನಾಮೆಯಡಿಯಲ್ಲಿ ದೈನಂದಿನ ಚಟುವಟಿಕೆಗಳನ್ನು ಪ್ರಾರಂಭಿಸಿದರು.

ಜುಲೈ ಎರಡನೆ ವಾರದಿಂದ ಆರಂಭಗೊಂಡ ಕಾರ್ಯಚಟುವಟಿಕೆಗಳು ಸ್ವಯಂಸೇವಕರ ಉತ್ಸಾಹ ಮತ್ತು ಪಾಲ್ಗೊಳ್ಳುವಿಕೆನ್ನು ಹೆಚ್ಚಿಸಲು ಕಾರಣವಾದವು. ವರ್ಷದುದ್ದಕ್ಕೂ ದೈನಂದಿನ ಚಟುವಟಿಕೆಗಳಾದ ಕಾಲೇಜು ಆವರಣ ಸ್ವಚ್ಛತೆ, ಆಟದ ಮೈದಾನ ಸ್ವಚ್ಛತೆ, ವಿವಿಧ ದಿನಾಚರಣೆಗಳ ಆಚರಣೆ ಸಸಿ ನೆಡುವುದು, ಸಸಿಗಳಿಗೆ ನೀರು ಹಾಕುವುದು, ಆರ್.ವೀರಮಣಿ ಕ್ರಿಡಾಂಗಣ ಸ್ವಚ್ಛತೆ, ಈಜುಕೊಳದ ಸುತ್ತಲು ಶ್ರಮದಾನ, ಮತ್ತು ರಾಷ್ಟ್ರೀಯ ಹಬ್ಬಗಳ ಆಚರಣೆ ಇತ್ಯಾದಿಗಳನ್ನು ನಿರ್ವಹಿಸಲಾಯಿತು.

ದಿನಾಂಕಃ 16–08–2018 ಮಧ್ಯಾಹ್ನ 12.20 ಗಂಟೆಗೆ ಎನ್.ಎಸ್.ಎಸ್. ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಭಾರತಿ ಕೆ. ನಾಯಕ ಅಧ್ಯಕ್ಷತೆಯಲ್ಲಿ ಪ್ರೊ. ಎಸ್. ಎಸ್. ಪಾಟೀಲ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಎನ್.ಎಸ್.ಎಸ್. ಹಾಕಿಕೊಂಡಿರುವ ಗುರಿ–ಉದ್ದೆಶಗಳು ಯಶಸ್ವಿಯಾಗಬೇಕಾದರೆ ಸ್ವಯಂ ಸೇವಕರ ಸ್ವಯಂ ಸ್ಪೂರ್ತಿಯಿಂದ ಕಾಯಾ–ವಾಚಾ–ಮನಸಾ ಕಾರ್ಯಪ್ರವರ್ತರಾಗಬೇಕು. ಜೀವನದುದ್ದಕ್ಕೂ ಸೇವಾ ಮನೋಭಾವನೆ ಬೆಳೆಸಿಕೊಂಡು ರಾಷ್ಟ್ರದ ಸೇವೆಯಲ್ಲಿ ತಾವೆಲ್ಲರೂ ತೊಡಗಿಸಿಕೊಳ್ಳಬೇಕೆಂದು ತಿಳಿಸಿದರು.

ದಿನಾಂಕಃ 15–08–2018 ರಂದು ನಮ್ಮ ರಾಷ್ಟ್ರೀಯ ಹಬ್ಬವಾದ ಸ್ವಾತಂತ್ರ್ಯ ದಿನಾಚರಣೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಭಾರತಿ ಕೆ. ನಾಯಕ ಅವರು ಧ್ವಜಾರೋಹಣ ಮಾಡುವ ಮೂಲಕ ನೆರವೇರಿಸಿದರು. ನಂತರ ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳೆಲ್ಲರೂ ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿ ಬೆಳೆಸಿಕೊಳ್ಳುವ ಮೂಲಕ ರಾಷ್ಟ್ರಕ್ಕೆ ಸ್ವಾತಂತ್ರ್ಯ ಒದಗಿಸಿಕೊಟ್ಟ ಮಹಾನ್ ನಾಯಕರ

ಆದರ್ಶಗಳನ್ನು ಪಾಲಿಸುವಂತೆ ಕರೆ ನೀಡಿದರು. ನಂತರ ಎನ್.ಎಸ್.ಎಸ್. ಸ್ವಯಂಸೇವಕರಿಗೆ ಅಲ್ಪೋಪಹಾರ ವಿತರಿಸಲಾಯಿತು.

ದಿನಾಂಕಃ 05-09-2018 ರಂದು ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯೆ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಗುರುಗಳ ತಮ್ಮ ವಿಚಾರಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು. ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಕರೆ ನೀಡಿದರು ಇತ್ತಿಚಿನ ಸಮಾಜದಲ್ಲಿ ಗುರುಗಳಿಗೆ ಇರುವ ಸ್ಥಾನಮಾನ ಕುಸಿಯುತ್ತಿದೆ. ಕಾರಣ ತಾವುಗಳು ಉತ್ತಮ ಶಿಕ್ಷಕರ ಗುಣಗಳನ್ನು ಅಳವಡಿಸಿಕೊಂಡು ತಮ್ಮ ಭವಿಷ್ಯ ಉಜ್ವಲವಾಗಿಸಿಕೊಳ್ಳುವಂತೆ ತಿಳಿಸಿದರು.

24-09-2018 ರಂದು ಎನ್.ಎಸ್.ಎಸ್. ದಿನಾಚರಣೆ ಆಚರಿಸಲಾಯಿತು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರೊ. ಎಸ್. ವ್ಹಿ. ಕಂಬಿ ರಾಷ್ಟ್ರಾಭಿವೃದ್ದಿ ಮತ್ತು ಗ್ರಾಮೀಣ ಜನರಿಗೆ ಜಾಗೃತಿ ಮೂಡಿಸುವಲ್ಲಿ ಎನ್.ಎಸ್.ಎಸ್. ಪಾತ್ರ ಅಮೋಘವಾಗಿದೆ ಎಂದರು. ಈ ಸಂದರ್ಭದಲ್ಲಿ ಹಳೆ ವಿದ್ಯಾರ್ಥಿಯಾದ ಇವರು ಮಹಾತ್ಮರ ಭಾವಚಿತ್ರಗಳನ್ನು ಕಾಣಿಕೆಯಾಗಿ ನೀಡಿದರು.

ದಿನಾಂಕಃ 02-10-2018 ರಂದು ರಾಷ್ಟ್ರ ಪಿತಾಮಹ ಮಹಾತ್ಮ ಗಾಂಧೀಜಿಯವರ ಮತ್ತು ಲಾಲ್ ಬಹದ್ದೂರ ಶಾಸ್ತ್ರೀಯವರ ಜನ್ಮ ಜಯಂತಿಯನ್ನು ಆಚರಿಸಲಾಯಿತು. ಮುಖ್ಯೆ ಅತಿಥಿಗಳಾದ ಪ್ರೊ. ಎಸ್. ಎಸ್. ಪಾಟೀಲ ಆಗಮಿಸಿ ಮಹಾತ್ಮ ಗಾಂಧೀಜಿಯವರ ಜೀವನದ ಸಾದನೆಗಳನ್ನು ಹಾಗೂ ಅವರು ಅನುಸರಿಸಿದ ಜಿವನದ ಮಾರ್ಗಗಳಾದ ಸತ್ಯ ಮತ್ತು ಅಹಿಂಸೆ ಬಗ್ಗೆ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಹೇಳಿದರು. ನಂತರ ಲಾಲ್ ಬಹದ್ದೂರ ಶಾಸ್ತ್ರೀಜಿಯವರಂತಹ ನಿಸ್ವಾರ್ಥ ಮನೋಭಾವನೆಯನ್ನು ಹೊಂದಿದ ರಾಜಕಾರಣಿಗಳು ಇರುವುದು ಅಪರೂಪವಾಗಿದೆ. ಕಾರಣ ರಾಷ್ಟ್ರ ಭವಿಷ್ಯವನ್ನು ನಿರ್ಮಿಸುವ ತಾವೆಲ್ಲರೂ ಉತ್ತಮ ನಾಗರಿಕರಾಗಬೇಕೆಂದು ಕರೆ ನೀಡಿದರು.

ದಿನಾಂಕಃ 26-01-2019 ರಂದು ಗಣರಾಜ್ಯೋತ್ಸವ ದಿನಾಚರಣೆ ಆಚರಿಸಲಾಯಿತು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಶ್ರೀಮತಿ. ಬಿ.ಕೆ. ನಾಯಕ ಅವರು ದೇಶಕ್ಕೆ ಸ್ವಾತಂತ್ರ್ಯ ಒದಗಿಸಿಕೊಟ್ಟ ಮಹಾನ್ ನಾಯಕರ ಆದರ್ಶ ತತ್ವಗಳನ್ನು ವಿದ್ಯಾರ್ಥಿಗಳು ತಮ್ಮ ಜೀವನಲ್ಲಿ ಅಳವಡಿಸಿಕೊಂಡು ನಮಗೆ ದೊರಕಿಸಿಕೊಟ್ಟ ಸ್ವಾತಂತ್ರ್ಯ ಯಾವುದೇ ಕಾರಣಕ್ಕೂ ತೊಂದರೆಗೊಳಗಾಗದಂತೆ ಜಾಗೃತಿ ವಹಿಸಲು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಎಲ್ಲಾ ಎನ್.ಎಸ್.ಎಸ್. ಸ್ವಯಂ ಸೇವಕರು ಪಾಲ್ಗೊಂಡಿದ್ದರು.

ದಿನಾಂಕ: 07-02-2019 ರಂದು ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು. ಬಾಗಲಕೋಟೆಯ ರಕ್ತ ಭಂಡಾರ ಅಧಿಕಾರಿಗಳಾದ ಡಾ. ಆರ್. ಜಿ. ಪಾಟೀಲ ಮುಖ್ಯ ಅತಿಥಿಗಳಾಗಿ ಆಗಮಿಸಿ ರಕ್ತದಾನದ ಅಗತ್ಯ ಮತ್ತು ಉಪಯುಕ್ತತೆಯ ಕುರಿತು ಉಪನ್ಯಾಸ ನೀಡಿದರು. 45 ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

ದಿನಾಂಕಃ 14-03-2019 ರಿಂದ 20-03-2019 ರ ವರೆಗೆ ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರವನ್ನು ಇಲಕಲ್ಲದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರದಲ್ಲಿ ವಿವಿಧ ಕಾರ್ಯಚಟುವಟಿಕೆಗಳಾದ ಗ್ರಾಮದ ಮುಖ್ಯೆ ಬೀದಿಗಳ ಸ್ವಚ್ಚತೆ. ರಸ್ತೆಗಳ ಸ್ವಚ್ಚತೆ, ರಸ್ತೆಗಳ ದುರಸ್ತಿ,

ಇಂಗು ಬಚ್ಚಲು ನಿರ್ಮಾಣ, ಇತ್ಯಾದಿ. ಪ್ರತಿದಿನ ಸಾಯಂಕಾಲ 4 ಗಂಟೆಗೆ ವಿವಿಧ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಲಾಯಿತು. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಗ್ರಾಮಸ್ಥರಿಗೆ ಹಲವಾರು ವಿಷಯಗಳ ಬಗ್ಗೆ ಜಾಗೃತಿ ಮೂಡಿಸಿದರು. ಉದಾಃ ಮೂಡನಂಬಿಕೆಗಳ ಬಗ್ಗೆ ಅರಿವು, ಮದ್ಯಪಾನ ನಿಷೇದ, ವರದಕ್ಷಿಣೆ ಪಿಡುಗು, ವಿದವಾ ಪುನರ್ ವಿವಾಹ, ಅನಕ್ಷರತೆ, ಬಡತನ, ನಿರುದ್ಯೋಗ, ಪರಿಸರ ಮಾಲಿನ್ಯ, ಇತ್ಯಾದಿಗಳ ಬಗ್ಗೆ ತಿಳುವಳಿಕೆ ನೀಡಿದರು.

ದಿನಾಂಕಃ 12-01-2019 ರಂದು ಸ್ವಾಮಿ ವಿವೇಕಾಂದರ ಜನ್ಮ ದಿನಾಚರಣೆಯ ಅಂಗವಾಗಿ ಯುವ ದಿನಾಚರಣೆ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಮಹಿಳಾ ಮಹಾವಿದ್ಯಾಲಯದ ಪ್ರೊ. ಎಸ್.ಎಸ್. ಪಾಟೀಲ ಅವರು ಆಗಮಿಸಿದ್ದರು. "ಯುವಶಕ್ತಿ-ದೇಶ ಶಕ್ತಿಯಾಗಿದೆ" ಯುವಕರು ಪ್ರಮಾಣಿಕವಾಗಿ ದೇಶ ಸೇವೆಯಲ್ಲಿ ಪಾಲ್ಗೊಂಡರೆ ರಾಷ್ಟ್ರಪ್ರಗತಿಯಾಗುವಲ್ಲಿ ಎರಡು ಮಾತಿಲ್ಲ ಎಂದರು. ಹಾಗೂ ಪ್ರಾಧ್ಯಾಪಕ ಬಂಧುಗಳು ಸೇರಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

25-03-2019 ರಂದು ಎನ್.ಎಸ್.ಎಸ್. ಮುಕ್ತಾಯ ಸಮಾರಂಭ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಶ್ರೀಮತಿ. ಬಿ.ಕೆ, ನಾಯಕ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಪಿ.ಎಸ್. ಕಂದಗಲ್ಲ ಆಗಮಿಸಿ ಎನ್.ಎಸ್.ಎಸ್. ಸ್ವಯಂ ಸೇವಕರು ತಮ್ಮ ವ್ಯಕ್ತಿತ್ವವನ್ನು ಹೇಗೆ ವಿಕಸನ ಮಾಡಿಕೊಳ್ಳಬೇಕು ಹಾಗೂ ಪದವಿ ನಂತರ ತಮಗೆ ಲಭ್ಯವಿರುವ ಅವಕಾಶಗಳ ಕುರಿತು ಮಾತನಾಡಿದರು. ಡಾ. ಎಸ್.ಜಿ. ಸಜ್ಜಲಗುಡ್ಡ ಸ್ವಾಗತಿಸಿ ಪರಿಚಯಿಸಿದರು.

2018-19 ನೇ ಸಾಲಿನಲ್ಲಿ ಹಮ್ಮಿಕೊಂಡ ಹಲವಾರು ಕಾರ್ಯಚಟುವಟಿಕೆಗಳಲ್ಲಿ ಎನ್.ಎಸ್.ಎಸ್. ಸ್ವಯಂ ಸೇವಕರು ಸಕ್ರೀಯವಾಗಿ ಪಾಲ್ಗೊಳ್ಳವ ಮೂಲಕ ಯಶಸ್ವಿಗೊಳಿಸಿದರು. ಎಲ್ಲಾ ಯಶಸ್ವಿಗೆ ಸಹಕರಿಸಿದ ಮಹಾವಿದ್ಯಾಲಯದ ಚೇರಮನ್ನರಿಗೆ, ಪ್ರಾಚಾರ್ಯರಿಗೆ, ಉಪಪ್ರಾಚಾರ್ಯರಿಗೆ, ಭೋದಕ ಹಾಗೂ ಭೋದಕೇತರ ಸಿಬ್ಬಂದಿಯವರಿಗೆ ಹಾಗೂ ಸ್ವಯಂಸೇವಕರಿಗೆ ಹೃದಯಪೂರ್ವಕ ವಂದನೆಗಳು.

-------0--------

N. S. S. Officer
S. V. M. College, ILKAL-587125

PRINCIPAL
S.V.M. Arts, Science and
Commerce College, ILKAL